Regd No. M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿಂಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 138] ಗುರುವಾರ 30–1–47 [ಬಿಡಿ ಪ್ರತಿ 3 ಪೈ

ಶ್ರೀ ದ್ವಾರಕಾ ಜಗದ್ಗುರುಗಳು

(ಸ್ವಂ. ಸು. ತಂತಿ)

ಬರೋಡ ಜ 28— ಶ್ರೀ ದ್ವಾರಕಾ ಶಾರದ ಪೀಠದ ಶ್ರೀ ಶಂಕರಾಚಾರ್ಯ ಸ್ವಾಮಿ ಅಭಿನವ ಸಚ್ಚಿದಾನಂದ ತೀರ್ಥ ಮಹಾರಾಜರು, ಬೊಂಬಾಯಿನಲ್ಲಿ ಶ್ರೀ ಲಕ್ಷ್ಮಚಂಡೀ ಮಹಾಯಜ್ಞವನ್ನೂ, ಧರ್ಮನಗರದ ಸಮ್ಮೇಳನಗಳನ್ನೂ ಮುಗಿಸಿಕೊಂಡು ಬರೋಡಾಕ್ಕೆ ದಯಮಾಡಿಸಿರುವರು. ಶ್ರೀಗಳವರು ಪ್ರತಿದಿನ ಉಪನ್ಯಾಸ ಮಾಡುತ್ತಿರುವರು ಬರೋಡಾದ ನ್ಯಾಯಮಂದಿರದಲ್ಲಿ ಜನವರಿ 31 ಮತ್ತು ಫೆಬ್ರವರಿ 1-2ನೇ ತಾರೀಖುಗಳಲ್ಲಿ ಸನಾತನ ಧರ್ಮ, ಗೋರಕ್ಷಣೆ ಮತ್ತು ದ್ವಾರಕಾಧೀಶ ವಿಶ್ವವಿದ್ಯಾಲಯ ಸಂಬಂಧಪಟ್ಟ ಸಮ್ಮೇಳನಗಳು ನಡೆಯುವುವು. ಈ ಸಮ್ಮೇಳನಗಳ ಅಧ್ಯಕ್ಷತೆಯನ್ನು ಶ್ರೀ ಶಾರದಾ ಪೀಠ ಜಗದ್ಗುರು ಶಂಕರಾಚಾರ್ಯರ್ಯರವರು ಬೊಂಬಾಯಿ ಗೋಸ್ವಾಮಿ ದೀಕ್ಷಿತ್ ಜೀ ಮಹರಾಜರೂ ಮತ್ತು ಬೊಂಬಾಯಿ ಗೋಸ್ವಾಮಿ ಕೃಷ್ಣಾಜೀ ಮಹರಾಜರೂ ವಹಿಸುವರು.

'ಭಾರತದ ನಾನಾಭಾಗದಿಂದ ಬಹು ಮಂದಿ ವಿದ್ವಾಂಸರು ಮತ್ತು ಸಾವಿರಾರು ಮಂದಿ ಸಾರ್ವಜನಿಕರು ಸಮ್ಮೇಳನಗಳಿಗೆ ದಯಮಾಡಿಸುವರು. ಆಹ್ವಾನ ಪತ್ರಿಕೆಗಳು ಅವರಿಗೂ ಮತ್ತು ಭಾರತದ ಅನೇಕ ಪುಂದಿ ರಾಜರಿಗೂ ಕಳುಹಿಸಲಾಗಿದೆ —

ಇಟಲಿಗೆ ಭಂಗಾರ ದೊರೆವುದು

ವಾಷಿಂಗ್‌ಟನ್ ಜ 27 — ಯುದ್ಧಕಾಲದಲ್ಲಿ ಇಟಲಿಯಿಂದ ಜರ್ಮನರು ಲೂಟಿ ಮಾಡಿದ್ದ 25 ರಿಂದ 30 ಟನ್ ಭಂಗಾರವನ್ನು ಬ್ರಿಟನ್ ಫ್ರಾನ್ಸು ಮತ್ತು ಅಮೇರಿಕಾವು ವಾಪಸು ಕೊಡಲು ಒಪ್ಪಿದೆ.

ಲೀಗ್ ಮಾಖಂಡರ ದಸ್ತಗಿರಿ

ಲಾಹೋರು ಜ 29— ಪ್ರತಿಬಂಧಕಾಜ್ಞೆಯನ್ನುಲ್ಲಂಘಿಸಿದ್ದಕ್ಕಾಗಿ ಇಲ್ಲಿ ಮೆತೆ ಲೀಗ್ ಮುಖಂಡರ ದಸ್ತಗಿರಿಯಾಗಿದೆ. ಪ್ರತಿಬಂಧಕಾಜ್ಞೆಗಳನ್ನು ತೆಗೆದುಹಾಕುವವರೆಗೂ ಉಲ್ಲಂಘನೆ ನಡೆಸುವುದಾಗಿ ಅವರು ಹೇಳುತ್ತಾರೆ

ಸ್ಕೌಟ್ ರ್ಯಾಲಿ

ಮೈಸೂರು — ಕಳೆದ ಭಾನುವಾರ ಜರಿದ ಸ್ಕೌಟು ರ್ಯಾಲಿಯಲ್ಲಿ ಸುಮಾರು ೯೦೦ ಸ್ಕೌಟುಗಳು ಭಾಗವಹಿಸಿದ್ದರು. ಸ್ಕೌಟ್ ಟ್ರೂಪಿಗೆ ಷೀಲ್ಡು ಯಿತು.

ಒಂದು ಡಬ್ಬಾ ಸೆಗಣಿಗೆ ಒಂದು ರೂಪಾಯಿ!

ಒಂದು ಸಣ್ಣ ಡಬ್ಬದ ತುಂಬಾ ಸೆಗಣಿಗೆ ಡಾಕ್ಕಾದಲ್ಲಿ ಒಂದು ರೂಪಾಯಿ ಬೆಲೆ ಪಡೆಯುತ್ತಾರಂತೆ.

ಪೌರಸಭೆ ವಕೀಲರ ಚುನಾವಣೆ

ಮೈಸೂರು ಜ 30 — ಮೈಸೂರು ಪೌರಸಭೆಯ ವಕೀಲರ ಚುನಾವಣೆಗಾಗಿ ನಾಳೆ ಮಧ್ಯಾಹ್ನ 3–30 ಗಂಟೆಗೆ ಪೌರಸಭಾ ವಿಶೇಷ ಅಧಿವೇಶನವಿದೆ. ಶ್ರೀಗಳಾದ ಕೆ. ಎಸ್. ಸುಬ್ಬರಾವ್, ಎಂ.ವಿ ಗೋಪಾಲರಾವ್, ಜಿ.ವೆಂಕಟರಾವ್, ಎಸ್. ಜೆ. ಮೈಸೂರುವಾಲಾ ಮತ್ತು ಎಸ್. ರಂಗರಾಮಯ್ಯ— ಇವರುಗಳು ಉಮೇದುವಾರರು

ಸುವರ್ಣ ತುಲಾಭಾರ ಮಹೋತ್ಸವ

ಸಾಂಗಲಿಯ ಗಜಾನನ ಮಿಲ್ಸ ನ ಒಡೆಯರಾದ ಶ್ರೀ ವಿ. ಆರ್. ವೇಲಣಕರ ಇವರ 60 ನೇ ಹುಟ್ಟಿದ ಹಬ್ಬದ ನಿಮಿತ್ತ ಅವರ ಸುವರ್ಣ ತುಲಾಭಾರ ಮಹೋತ್ಸವವು ವೈಭವದಿಂದ ನೆರವೇರಿಸಲಾಯಿತು. ಅವರ ತೂಕದ ಭಂಗಾರವು ಸಧ್ಯದ ಬೆಲೆಯಂತೆ 537104 ರೂಪಾಯಿದ್ದಾಯಿತು. ಅದನ್ನು ಅವರು ವಿವಿಧ ಸಂಸ್ಥೆಗಳಿಗೆ ಕಾಣಿಕೆಕೊಟ್ಟರು.

ಪ್ರಚಾರೋಪನ್ಯಾಸ

ಮೈಸೂರು ಜ 30 — ಮದ್ರಾಸ್ ವಿಶ್ವವಿದ್ಯಾನಿಲಯದ ಪ್ರೊ|| ಎಡ್ವರ್ಟ್‌ಸ ರವರು ಫೆಬ್ರವರಿ 1 ತಾ|| 1 ರಲ್ಲಿ ಮಹಾರಾಜಾ ಕಾಲೇಜ್ ಜೂನಿಯರ್ ಬಿ. ಎ. ಹಾಲಿನಲ್ಲಿ ಆಮೇರಿಕ ರಚನಾ ಪಾಠಗಳು ಎಂಬುದರ ಮೇಲೆ ಉಪನ್ಯಾಸ ಮಾಡುತ್ತಾರೆ.

ವರ್ತಮಾನ ಸಂಗಹ

❋

ಚಿಕಾಗೋ, ಜ 27 — ರೋಟರಿ ಇಂಟರ್ ನೇಷನಲ್ ಎಂದು ಪ್ರಸಿದ್ಧಗೊಂಡಿರುವ ಸಂಸ್ಥೆಯ ಸ್ಥಾಪಕರಾದ ಚಿಕಾಗೋ ಲಾಯರು ಮಿ || ಪಾಲ್ ಹ್ಯಾರಿಸ್ ಎನ್ನುವವರು ಮೃತರಾದರು ಅವರಿಗೆ 72 ವರ್ಷ ವಯಸ್ಸಾಗಿತ್ತು.

ಮದರಾಸು ಜ 28 — ಗೋಧಿ ಸೇವಿಸುವ ಸ್ಥಳಗಳಲ್ಲಿನ ಅಭಾವ ದೂರೀಕರಿಸಲು ಮದರಾಸು ಸರಕಾರವು ಭಾರತ ಸರಕಾರಕ್ಕೆ 3 ಸಾವಿರ ಟನ್ ಗೋಧಿ 2 ಸಾವಿರ ಟನ್ ಮುಸುಕಿನ ಜೋಳವನ್ನು ಕೊಡುವುದು. ಇದಕ್ಕೆ ಬದಲಾಗಿ ಭಾರತ ಸರಕಾರವು 10 ಸಾವಿರ ಟನ್ ಅಕ್ಕಿ ಮತ್ತು 4 ಸಾವಿರ ಟನ್ ಜೋಳವನ್ನು ಕೊಡುವುದು.

ತಡೆಸಾಲಿಗುಡಂ — ಡಿ ಸ್ಟ್ರಿಕ್ಟ್ ಬೋರ್ಡ್ ಶಾಲಾ ಉಪಾಧ್ಯಾಯರು ಮೀಟಿಂಗು ನಡೆಸಿ ತಮ್ಮ ಸಂಬಳ ಹೆಚ್ಚಿಸಬೇಕೆಂಬ ನಿರ್ಣಯ ಮಾಡಿರುವರು. ಅಧಿಕಾರಿಗಳು ಸಂಬಳ ಹೆಚ್ಚಿಸದಿದ್ದರೆ ಹೊಸ ರೀತಿ ಮುಷ್ಕರ ಆರಂಭಿಸುವರಂತೆ ತರಗತಿಗಳಲ್ಲಿ ಕುಳಿತಿದ್ದು ಪಾಠ ಹೇಳುವುದರ ಬದಲು ಸಂಬಳ ಹೆಚ್ಚಲೆಂದು ಪ್ರಾರ್ಥಿಸುತ್ತಿರುವರಂತೆ.

ನವದೆಹಲಿ ಜ 25— ಭಾರತಕ್ಕೆ ಯಾತ್ರಾರ್ಥಿಯಾಗಿ ಬಂದಿರುವ ನೇಪಾಳದ ನಿವೃತ್ತ ಮುಖ್ಯಮಂತ್ರಿಗಳು 1 ಲಕ್ಷ ರೂಪಾಯನ್ನು ಭಾರತದ ಪೀಡಿತರ ಪರಿಹಾರಕ್ಕಾಗಿ ಉಪಯೋಗಿಸಲು ಪಂಡಿತ ನೆಹ್ರೂರವರ ಕೈಲಿ ಕೊಟ್ಟಿರುವರು.

ಬೆಂಗಳೂರು ಜ 29 — ಶ್ರೀ ಗೋಪಾಲಕಾಯರು ಶ್ರೀ ಸರ್ವೋತ್ತಮರಾವ್ ಮುಂತಾದವರ ಮೇಲೆ ಮಾಡಿರುವ ಮೊಖದ್ದಮೆ ವಿಚಾರಣೆ ಈದಿನ ಪ್ರಾರಂಭವಾಯಿತು.

ಶ್ರೀರಂಗ ದೇವಸ್ಥಾನಕ್ಕೂ ಹರಿಜನ ಪ್ರವೇಶವೇ?

ಮದರಾಸು ಜ 29 — ದಕ್ಷಿಣ ಭಾರತದ ಅತಿ ಪುರಾತನ ಮತ್ತು ಮುಖ್ಯವಾದ ದೇವಾಲಯಗಳಲ್ಲೊಂದಾದ ಇಲ್ಲಿಯ ಶ್ರೀರಂಗನಾಥಸ್ವಾಮಿಯ ದೇವಾಲಕ್ಕೆ ಎಲ್ಲಾ ಹಿಂದೂಗಳ ಪ್ರವೇಶಕ್ಕೂ ಅವಕಾಶ ಕೊಡುವಂತೆ ಸರ್ಕಾರಿ ಆಜ್ಞೆಯಾಗಿದೆ.

ಸಿರಿಯಾ ಟರ್ಕಿ ವ್ಯಾಜ್ಯ

ಡಮಾಸ್ಕಸ್ ಜ 28 — ಅಲೆಗ್ಜಾಂಡ್ರೆಟಾ ಬಂದರಿನ ವಿಷಯದಲ್ಲಿ ಸಿರಿಯಾವು ಟರ್ಕಿ ಮೇಲೆ ವಿಶ್ವ ಸಂಸ್ಥೆಯಲ್ಲಿ ದೂರು ಕೊಡುವುದಾಗಿ ಮುಖ್ಯ ಮಂತ್ರಿ ಹೇಳಿರುವರು. ಸಿಸಿಲಿಯಾವನ್ನು ತನಗೆ ಟರ್ಕಿಯಿಂದ ಕೊಡಿಸಬೇಕೆಂದೂ ಕೇಳುವುದು.

ಆಂಗ್ಲೋ ಈಜಿಪ್ಟ್ ಒಪ್ಪಂದ

ಕೈರೋ ಜ 28 — 1936 ರಲ್ಲಿ ಸಡೆದ ಆಂಗ್ಲೋ ಈಜಪ್ಟ್ ಒಪ್ಪಂದವನ್ನು ರದ್ದು ಗೊಳಿಸಲು ಈಜಿಪ್ಟು ವಿಶ್ವಸಂಸ್ಥೆಯಲ್ಲಿ ಮನವಿ ಮಾಡುವುದೆಂದು ಮುಖ್ಯ ಮಂತ್ರಿ ಹೇಳಿದ್ದಾರೆ.

ಬರ್ಮಾಕ್ಕೆ ಸ್ವರಾಜ್ಯವೇ

ಲಂಡನ್ ಜ 28 — ಬರ್ಮಾಕ್ಕೆ ಭಾರತದಂತೆ ತಾತ್ಕಾಲಿಕ ಸರಕಾರ ಮತ್ತು ರಾಜ್ಯಾಂಗ ಸಭೆ ಕೊಡಲಾಗುವುದೆಂದು ಪಾರ್ಲಿಮೆಂಟು ಶ್ವೇತ ಪತ್ರ ತಿಳಿಸುತ್ತದೆ.

ಗುಂಡು ಹಾರಿಸಲಾಯಿತು

ಪಂಜಾಂಗ್ ಜ 28 — ಗಾಂಧೀಜಿಯವರು ಇಲ್ಲಿಗೆ ಬಂದಿದ್ದಾರೆ. ಇಲ್ಲಿನ 7 ಮೈಲಿ ದೂರದಲ್ಲಿರುವ ನವಖೋಲಾ ಗ್ರಾಮದಲ್ಲಿ ಪೋಲೀಸರು ತಾ||25 ರಲ್ಲಿ ಲೂಟಿ ಸಾಮಾನು ಶೇಖರಿಸಿದ್ದವನನ್ನು ದಸ್ತಗಿರಿ ಮಾಡಲು ಹೋದಾಗ ಎದುರಿಸಲು ಬಂದ ಶಸ್ತ್ರ ಸಜ್ಜಿತ ಗುಂಪಿನ ಮೇಲೆ ಪೋಲೀಸರು ಗುಂಡುಹಾರಿಸಿದರು.

ಮಹಾ ಪ್ರಧಾನರ ಪ್ರಶಂಸೆ

ಮದರಾಸು ಜ 29 — ಮದರಾಸು ಮೌಂಟ್ ರೋಡಿನಲ್ಲಿರುವ ಗೌರ್ನಮೆಂಟು ಹೌಸ್ ಆಸ್ತಿಗಳನ್ನು ಮದರಾಸು ಸರಕಾರಕ್ಕೆ ವಹಿಸಿಕೊಡುವಾಗ ಮಾಡಿದ ಭಾಷಣದಲ್ಲಿ ಗೌರ್ನರರು ಮುಖ್ಯ ಮಂತ್ರಿ ಪ್ರಕಾಶಂರನ್ನು ಅನೇಕ ಸದ್ಗುಣಗಳಿಗಾಗಿ ಪ್ರಶಂಸಿಸಿದರು.

ಆಂಗ್ಲೇಯನುಗೂರ್ಖನನ್ನು ದತ್ತುತೆಗೆದುಕೊಂಡ

ಲಂಡನ್ ತಾ|| 22 — ರಾಯಲ್ ಗುರ್ಖಾ ರೈಫಲ್ ದಲದ ಮೇಜರ ವಿನ್ಸೆಂಟ ಕ್ಯಾಂಬೆಲ್‌ರು ಜಾಸೆ ಬಹಾದ್ದೂರ ಜುರಂಗ ಎಂಬ ತರುಣ ಗುರ್ಖಾನನ್ನು ದತ್ತು ತೆಗೆದುಕೊಂಡರು.

ಈ ಸುದ್ದಿ ಇಂದು ನ್ಯೂಜ ಕ್ರಾನಿಕಲ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದು ಬ್ರಹ್ಮ ದೇಶದಲ್ಲಿ ಯುದ್ಧ ನಡೆದಾಗ ಹದಿನಾರು ವರ್ಷದ ಈ ಗುರ್ಖಾ ಯುವಕನು ಅತ್ಯಂತ ಸಾಹಸದಿಂದ ವಿನ್ಸೆಂಟ ಕ್ಯಾಂಬೆಲ್ ಪ್ರಾಣವನ್ನುಉಳಿಸಿದನಂತೆ. ಈಗ ಗುರ್ಖಾನಿಗೆ ಮೈಕೆಲ್ ಎಂದು ನಾಮಕರಣ ಮಾಡಲಾಗಿದೆ.

ಮೇಜರ ಕ್ಯಾಂಬೆಲ್‌ರು ಈ ಸಂಬಂಧದಲ್ಲಿ ಹೇಳಿದ್ದೇನೆಂದರೆ —

ನನ್ನ ಪ್ರಾಣವನ್ನುಳಿಸಿದ ಮೈಕೆಲನನ್ನು ನಾನು ಮತ್ತು ನನ್ನ ಪತ್ನಿ ದತ್ತು ಮಗನನ್ನಾಗಿ ಮಾಡಿಕೊಂಡಿರುವೆವು. ಬ್ರಹ್ಮೀ ಅರಣ್ಯದಲ್ಲಿ ಅವನು ನನ್ನ ಪ್ರಾಣವನ್ನೆಂತು ರಕ್ಷಿಸಿದನೆಂಬುದನ್ನು ಇಲ್ಲಿ ಹೇಳಲಾರೆ ಆದರೆ ಅಂದಿನಿಂದ ನನ್ನಲ್ಲಿ ಪ್ರೇಮ ಬೆಳೆಯಿತೆಂದು ಹೇಳಲು ಸಂತೋಷವಾಗುತ್ತದೆ.

ಅವನನ್ನು ದತ್ತು ತೆಗೆದು ಕೊಳ್ಳಬೇಕೆಂದು ಮೊದಲು ಸೂಚಿಸಿದವಳು ನನ್ನ ಪತ್ನಿ. ನಮಗಾದರೂ ಈಗ ಮಕ್ಕಳಿಲ್ಲ. ಎರಡು ವರ್ಷ ಕಷ್ಟ ಪಟ್ಟು ಕಾಯಿದೆ ಪ್ರತಿಬಂಧಗಳನ್ನೆಲ್ಲ ನಿವಾರಿಸಿದ ನಂತರ ಕಳೆದ ಮೇ ತಿಂಗಳು ಹಿಂದೂ

For Quality Printing
L. N. Press
Sriramp et, MYSORE

ಅ ಕ ರ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

ಶ್ರೀರಂಗಪಟ್ಟಣ

ಸ್ವಂ. ಸು.] ಜ 28

ಶ್ರೀರಂಗಪಟ್ಟಣದ ಮುನಿಸಿಪಲ್ ಕೌನ್ಸಿಲಿನವರು ಹೈಕ್ಕೂಲಿನ ಕಮಿಟಿಗೆ ಶ್ರೀ ಎಸ್. ವಿ. ಚಂದ್ರಶೇಖರಯ್ಯನವರನ್ನು ಕೋ ಆಪ್ಟು ಮಾಡಿಕೊಂಡಿದ್ದರ ಮೇಲೆ ತಾವು ಯಾವಾಗಲೂ ಸೇವೆಯಷ್ಟೆ ಸಲ್ಲಿಸಲು ಸಿದ್ದರಾಗಿರುವುದಾಗಿ ಭರವಸೆ ಕೊಟ್ಟು ತಮಗೆ ಬದಲಾಗಿ ಚಂದಗಾಲ ಸಾಹುಕಾರ ಬಿ ಮುರಿಗೌಡರನ್ನು ಕೋ ಆಪ್ಟು ಮಾಡಿಕೊಳ್ಳಬೇಕೆಂದು ಡಿಟೋ ಚಂದ್ರಶೇಖರಯ್ಯನವರು ರಾಜಿನಾಮಾ ಇತ್ತಿರುತ್ತಾರೆ ಇವರ ಜೊತೆಗೆ ಇನ್ನು ಕೆಲವು ಮಹನೀಯರುಗಳನ್ನು ಕೋ ಆಪ್ಟು ಮಾಡಿಕೊಳ್ಳಬಹುದಾಗಿರುತ್ತೆ.

ಮಹಾಭಿಷೇಕ

ಈ ಊರಿನಲ್ಲಿರುವ ಶ್ರೀ ಕಾವೇರಿ ವೆಂಕಟರಮಣಸ್ವಾಮಿಯವರ ಮಹಾಭಿಷೇಕವು ತಾ|| 5-2-47 ನೇ ಬುಧುವಾರ ನಡೆಯುತ್ತೆ. ಮಹಾಜನಗಳು ದಯಮಾಡಿಸಬೇಕಾಗಿ ಪ್ರಾರ್ಥನೆ.

ದೀಪಗಳಿಲ್ಲ

ಈ ಊರಿನ ಕೆಲವು ಕಡೆ ದೀಪಗಳಿಲ್ಲದೆ ರಾತ್ರಿವೇಳೆಯಲ್ಲಿ ತಿರುಗಾಡುವ ಜನಗಳಿಗೆ ತುಂಬಾ ತೊಂದರೆಯಾಗಿರುವುದರಿಂದ ಕೂಡಲೇ ಲೈಟುಗಳನ್ನು ಹಾಕಿಸುವುದು ಅವಶ್ಯಕ.

ಒದಲಾವಣೆ

ಈ ಊರಿನಲ್ಲಿ ತೆರೆದಿರುವ ಕಾವೇರಿ ಶ್ರೀನಿವಾಸ ಪಬ್ಲಿಕ್ ವಾಚನಾಲಯವು ತಾ || 25-2-47 ರಿಂದ ಕಿರಂಗೂರು ಗ್ರಾಮಕ್ಕೆ ಬದಲಾಯಿಸಲ್ಪಡುವುದು.

ಸ್ಥಾನದಲ್ಲಿ ಹಿಂದು ಕಾಯಿದೆಗನುಸರಿಸಿ ದತ್ತುವಿಧಾನ ಪೂರೈಸಿತು.

ನನ್ನ ಮಗ ಮೈಕೆಯಲನು ಎರಡು ವಾರಗಳ ಹಿಂಜಿ ಇಲ್ಲಿಗೆ ಬಂದಿದ್ದು ನಾಳೆಯಿಂದ ಇಲ್ಲಿಯ ಇಂಗ್ಲೀಷ ಶಾಲೆಗೆ ಅವನನ್ನು ಕಳಿಸಲಾಗುವುದು. ಅವನು ಇಂಗ್ಲೀಷ ಶಾಲೆಗೆ ಹೋಗುವದು ಇದೇ ಮೊದಲು. ಅಲ್ಲಿ ಅವನಿಗೆ ಪ್ರತ್ಯೇಕ ಶಿಕ್ಷಣ ಕೊಡಸಲಾಗುವದು. ಅವನು ಡಾಕ್ಟರನಾಗಬೇಕೆನ್ನುತ್ತಾನೆ. (ನ.ಭಾ.

ಚಳಿಜ್ವರಕ್ಕೆ
ಉಚಿತವಾಗಿ ಔಷಧವನ್ನು
ಕೊಡಲಾಗುವುದು.
ಆ ಶೋ ಕಾ ಫಾರ್ಮಸಿ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Caontct with Satyanarayana Pictures Ramanuja Road Mysore

ಶಕ್ತಿಸುಧಾ ಸೇವಿಸಿ
ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ
ನಿಸ್ಸಾರವಾದ, ನಶಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.
ವಿಳಾಸ — ಶಕ್ತಿಸುಧಾ, 1067 ಚಾಮರಾಜಪುರಂ, ಮೈಸೂರು

At Ranjit—— 2nd Glorious Week
BANSARI
ಚಾರ್ಲಿ, ಈಶ್ವರ್‌ಲಾಲ್, ಪದ್ಮಾಂ, ದೀಕ್ಷಿತ್, ಕೇಸರಿ ಪಾತ್ರವಹಿಸಿರ್.
From 31-1-47 ಷಹಜಹಾನ್

At Opera — From 24-I-47
JUNGLE GODDESS
— Starring —
Noah Berry — Dorothy Short — Fredric Mackaya
Daily 3 Shows

Edited, Printed and Published by M. S Krishna Rao at the Satyavadi Press ChamarajAgrahar, Mysore.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆಠಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರಸಳಕೆ, ಅಂಚೆವೆಚ ಸೇರಿ